13

ಇಲಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ

ದಿನಾಂಕ : DATE : 13/2/21

# ಸಿಎಂ ಬೆನ್ನಿಗೆ ವರಿಷ್ಠರು ಯತ್ನಾಳ್‌ಗೆ ನೋಟಿಸ್

ವಿ.ವಾ. 13-2-21

ಬೆಂಗಳೂರು: ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹಾಗೂ ಸರ್ಕಾರದ ವಿರುದ್ಧ ಪದೇಪದೆ ಹೇಳಿಕೆ ನೀಡುತ್ತ ಪಕ್ಷಕ್ಕೂ ಮುಜುಗರ ತರುತ್ತಿದ್ದ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್‌ಗೆ ಕಾರಣ ಕೇಳಿ ಬಿಜೆಪಿ ನೋಟಿಸ್ ನೀಡಿದೆ. ಅಸಮಾಧಾನವಿದ್ದರೆ ಪಕ್ಷದ ವೇದಿಕೆಯಲ್ಲಿ ಚರ್ಚಿಸಬಹುದಿತ್ತು. ಬಹಿರಂಗವಾಗಿ ಹೇಳಿಕೆ ನೀಡುವ ಔಚಿತ್ಯವೇನಿತ್ತು? ಎಂದು ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಪ್ರಶ್ನಿಸಿದ್ದಾರೆ. ಅಲ್ಲದೆ, ಪಕ್ಷವಿರೋಧಿ ಚಟುವಟಿಕೆಗಳಿಗೆ ಕಾರಣವೇನು? ಎಂದು ಸಮಜಾಯಿಷಿ ಕೇಳಿ ಯತ್ನಾಳ್‌ಗೆ ನೋಟಿಸ್ ನೀಡಿರುವುದನ್ನು ದೃಢಪಡಿಸಿದ್ದಾರೆ. ಸೂಕ್ತ ಉತ್ತರ ನೀಡುವುದಕ್ಕೆ ಏಳು ದಿನಗಳ ಕಾಲಾವಕಾಶ ನೀಡಲಾಗಿದೆ. ಯತ್ನಾಳ್ ಹೇಳಿಕೆ ಹಾಗೂ ನಡವಳಿಕೆ ಕುರಿತು ರಾಜ್ಯ ಬಿಜೆಪಿ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಬೇಸರ ವ್ಯಕ್ತಪಡಿಸಿದ್ದರು. ಈ ವಿಷಯದಲ್ಲಿ ಒತ್ತಡ ಹೆಚ್ಚಾದ ಬಳಿಕ ಕೇಂದ್ರ ಶಿಸ್ತು ಸಮಿತಿ ಗಮನಕ್ಕೆ ತಂದಿದ್ದರು.



**ನೋಟಿಸ್** ತಲುಪಿದ ಬಳಿಕ ಓದಿಕೊಂಡು ಯಾವ ಕಾರಣಕ್ಕಾಗಿ ಹೇಳಿಕೆ ಕೊಟ್ಟೆನೆಂದು ಸ್ಪಷ್ಟವಾಗಿ ತಿಳಿಸುವೆ. ಕೆಲವರು ನನಗೆ ನೋಟಿಸ್ ನೀಡಬೇಕು ಎಂದು ಡಿಮಾಂಡ್ ಮಾಡಿದ್ದರು.

| ಬಸನಗೌಡ ಪಾಟೀಲ್ ಯತ್ನಾಳ್ ಶಾಸಕ

ಪುಟ 7A

# ಯತ್ನಾಳ್‌ಗೆ ನೋಟಿಸ್

ವಿ.ವಾ. 13-2-21

ಮೊದಲನೇ ಪುಟದಿಂದ...

**ಬಿಎಸ್‌ವೈಗೆ ಬಲ:** ಯತ್ನಾಳ್‌ಗೆ ನೋಟಿಸ್ ನೀಡುವ ಮೂಲಕ ಸಿಎಂ ಬಿಎಸ್‌ವೈ ಬೆನ್ನಿಗೆ ನಿಂತಿರುವ ವರಿಷ್ಠರು ಯತ್ನಾಳ್ ಹೇಳಿಕೆ ಹಿಂದೆ ಕಾಣದ ಕೈಗಳ ಕೈವಾಡವಿಲ್ಲ ಎಂದೂ ಸ್ಪಷ್ಟಪಡಿಸಿದಂತಿದೆ. ಆರಂಭದಲ್ಲೇ ಮೂಗುದಾರ ಹಾಕಿದ್ದರೆ ಅವರಿಂದ ಮುಜುಗರದ ಹೇಳಿಕೆಗಳು ಹೊರ ಬೀಳುತ್ತಿದ್ದಿಲ್ಲ ಎಂದು ಸಿಎಂ ಆಪ್ತರು ಗೊಣಗಿದ್ದರೆ, ಅರುಣ್ ಸಿಂಗ್ ಬಳಿ ಬಿಎಸ್‌ವೈ ಅವರೇ ಈ ವಿಚಾರವಾಗಿ ಗಮನಸೆಳೆದಿದ್ದರು. ಯತ್ನಾಳ್‌ಗೆ ನೋಟಿಸ್ ರವಾನೆಯಾಗಿರುವ ಕಾರಣ ಪಕ್ಷ ಮತ್ತು ಸರ್ಕಾರದ ನಡುವಣ ಸಂವಹನ ಕೊರತೆ, ಅಪನಂಬಿಕೆ ದೂರವಾಗುವ ಸಾಧ್ಯತೆಗಳಿವೆ ಎಂದು ಮೂಲಗಳು ತಿಳಿಸಿವೆ.

## ಅಸಮಾಧಾನಿತರಿಗೆ ಎಚ್ಚರಿಕೆ

**ಯತ್ನಾಳ್‌ಗೆ ನೋಟಿಸ್ ನೀಡುವ ಮೂಲಕ ಇನ್ನುಳಿದ ಅಸಮಾಧಾನಿತರಿಗೆ ಪಕ್ಷದ ವರಿಷ್ಠರು ಎಚ್ಚರಿಕೆ ಸಂದೇಶ ರವಾನಿಸಿದ್ದಾರೆ. ಬಿಎಸ್‌ವೈ ಬದಲಾಗಲಿದ್ದಾರೆ, ಉತ್ತರ ಕರ್ನಾಟಕದವರೇ ಸಿಎಂ ಆಗಲಿದ್ದಾರೆ ಎಂದಿದ್ದ ಯತ್ನಾಳ್, ಸಚಿವ ಸಂಪುಟ ವಿಸ್ತರಣೆ ಬಳಿಕ ಸಿ.ಡಿ. ಬಾಂಬ್ ಸಿಡಿಸಿದ್ದರು.**

## ನೋಟಿಸ್‌ನಲ್ಲಿ ಏನಿದೆ ?

- ಪಕ್ಷವಿರೋಧಿ ಚಟುವಟಿಕೆಗಳಿಗೆ ಕಾರಣಗಳೇನು?
- ಮುಖ್ಯಮಂತ್ರಿ ವಿರುದ್ಧ ಪದೇಪದೆ ಹೇಳಿಕೆ ನೀಡುತ್ತಿರುವುದೇಕೆ?
- ಪಕ್ಷ ಹಾಗೂ ಸರ್ಕಾರದ ನಾಯಕತ್ವ ಪ್ರಶ್ನಿಸುವ ಔಚಿತ್ಯವೇನು?
- ಅಸಮಾಧಾನವನ್ನು ಪಕ್ಷದ ನಾಯಕರ ಗಮನಕ್ಕೆ ತರಬಹುದಿತ್ತಲ್ಲ?
- ಪಕ್ಷದ ವೇದಿಕೆಯಲ್ಲಿ ಚರ್ಚಿಸಲು ಅವಕಾಶವಿತ್ತಲ್ಲವೆ?
- ಹೇಳಿಕೆ ಪಕ್ಷ ಹಾಗೂ ಸರ್ಕಾರದ ವರ್ಚಸ್ಸಿಗೆ ಧಕ್ಕೆ ತರುವುದಿಲ್ಲವೆ?